ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:1774/2023

ಚಾಸಾ:1 ಪ್ರಾಸಾ:1

ದಿನಾಂಕ: 24.02.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಮನೊರಂಜನ್ ಶೆಟ್ಟಿ |
| ತಂದೆಯ ಹೆಸರು | : | ಶಿವರಾಮ ಶೆಟ್ಟಿ |
| ವಯಸ್ಸು | : | 65 ವರ್ಷ |
| ಉದ್ಯೋಗ | : | ಸೊಸೈಟಿಯಲ್ಲಿ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿ |
| ವಾಸ ಸ್ಥಳ | : | ಕೊಟೇಶ್ವರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ನಾನು 2013 ರಿಂದ ಮೂಕಾಂಬಿಕಾ ವಿವಿದೋದ್ದೇಶ ಸೌಹಾರ್ದ ಸಹಕಾರಿ ಸಂಘದಲ್ಲಿ ಮುಖ್ಯ ಕಾರ್ಯ ನಿರ್ವಾಹಣಾ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಆರೋಪಿಯು ದಿ: 14-07-2014 ರಿಂದ ನಮ್ಮ ಸಂಘದ ಸದಸ್ಯರಾಗಿದ್ದು, ಅನಂತರ ದಿ: 04-11-2015 ರಂದು ನಮ್ಮ ಸಂಘದಿಂದ ರೂಪಾಯಿ 21 ಲಕ್ಷ ಹಣವನ್ನು ಅಡಮಾನ ಸಾಲವಾಗಿ ಪಡೆದಿದ್ದು, ಅದಕ್ಕೆ ಕುಂದಾಪುರ ತಾಲೂಕು ವಡೇರ ಹೋಬಳಿ ಗ್ರಾಮದ ಸರ್ವೆ ನಂಬ್ರ 166/1 ನ 15 ಸೆಂಟ್ಸ್ ಜಾಗವನ್ನು ಅಡಮಾನವಾಗಿ ಇಟ್ಟಿರುತ್ತಾರೆ. ಸದ್ರಿ ಸಾಲಕ್ಕೆ ಆತನ ಪತ್ನಿ ನಿರ್ಮಲ ಹಾಗೂ ಕುಂದಾಪುರದ ಹೂವಿನ ವ್ಯಾಪಾರಿ ನವೀನ್ ರವರು ಜಾಮೀನುದಾರರಾಗಿರುತ್ತಾರೆ. ಆರೋಪಿ ಸಾಲ ಮರುಪಾವತಿ ಮಾಡದೆ ಸಾಲವು ಸುಸ್ತಿಯಾಗಿದ್ದು, ಅದರಿಂದ ನಾವು ಸೌಹಾರ್ದ ಸಂಘಗಳ ಕಾಯಿದೆ ಅಡಿ ದಾವೆ ದಾಖಲು ಮಾಡಿದ್ದು, ನಮ್ಮ ಪರವಾಗಿ ಆದೇಶವಾಗಿರುತ್ತದೆ. ಈ ಮಧ್ಯೆ ಆರೋಪಿ ನನ್ನ ನಕಲಿ ಸಹಿಯನ್ನು ಹಾಗೂ ಸಹಕಾರಿ ಸಂಘದ ಶೀಲನ್ನು ನಕಲಿ ಮಾಡಿ ಸಾಲ ಚುಕ್ತ ರಶೀದಿಯನ್ನು ಸೃಷ್ಟಿಸಿ ದಿ: 29-11-2018 ರಂದು ಉಪ ನೋಂದಣಾಧಿಕಾರಿ ಕುಂದಾಪುರ ಇವರಿಗೆ ಸಲ್ಲಿಸಿ ಕಂದಾಯ ದಾಖಲೆಗಳಲ್ಲಿ ನಮ್ಮ ಸಂಘದ ಅಡಮಾನದ ದಾಖಲೆಗಳನ್ನು ತೆಗೆಯಿಸಿ ಬೇರೊಂದು ಸಹಕಾರಿ

ಸಂಘದಿಂದ ರೂಪಾಯಿ 10 ಲಕ್ಷ ಸಾಲವನ್ನು ಸದ್ರಿ ನಮ್ಮ ಬಳಿ ಅಡಮಾನ ಮಾಡಿದ ಸ್ಥಳದ ಮೇಲೆ ಸಾಲ ಪಡೆದಿರುತ್ತಾರೆ. ಸದ್ರಿ ವಿಚಾರ ನಮ್ಮ ಗಮನಕ್ಕೆ ಬಂದಾಗ ನಾವು ದಿಃ 27-03-2021 ರಂದು ನಮ್ಮ ಸಹಕಾರಿ ಸಂಘದ ಆಡಳಿತ ಮಂಡಳಿ ಸಭೆಗೆ ಆರೋಪಿಯನ್ನು ಕರೆದು ವಿಚಾರಿಸಿದಾಗ ಆತ ಹಣದ ಅಗತ್ಯವಿರುವ ಕಾರಣ ಹಾಗೂ ಸಾಲ ಚುಕ್ತ ಮಾಡಲು ಆಗದೆ ಮಿತ್ರ ಸೌಹಾರ್ದ ಸಹಕಾರಿ ಸಂಘ ಕುಂದಾಪುರದಿಂದ ರೂಪಾಯಿ 10 ಲಕ್ಷ ಸಾಲವನ್ನು ಪಡೆದಿರುವುದಾಗಿ ತಿಳಿಸಿರುತ್ತಾರೆ.

ದಿಃ 31-03-2021 ರೊಳಗೆ ರೂಪಾಯಿ 3 ಲಕ್ಷವನ್ನು ಮತ್ತು ಉಳಿದ ಸಾಲ ಹಾಗೂ ಬಡ್ಡಿಯನ್ನು ದಿಃ 30-04-2021ರೊಳಗೆ ಸಹಕಾರಿ ಸಂಘಕ್ಕೆ ಚುಕ್ತ ಮಾಡುವವರೆಗೂ ಯಾವುದೇ ಕಾನೂನು ಕ್ರಮ ಕೈಗೊಳ್ಳಬಾರದೆಂದು ತಪೊಪ್ಪಿಗೆ ಬರೆದುಕೊಟ್ಟಿರುತ್ತಾರೆ. ಅದಕ್ಕೆ ರಾಘವೇಂದ್ರ ಗೋಟಾ ಮತ್ತು ನವೀನ್ ರವರು ಸಾಕ್ಷಿಯಾಗಿರುತ್ತಾರೆ.

ದಿಃ 25-09-2021 ರಂದು ಇನ್ನೊಂದು ಮುಚ್ಚಳಿಕೆ ಪತ್ರವನ್ನು ಬರೆದುಕೊಟ್ಟಿದ್ದು ಅದರಲ್ಲಿ ತಾನು ಹಿಂದೆ ಹೇಳಿದಂತೆ ಸಾಲವನ್ನು ಮರುಪಾವತಿಸಲು ಸಾಧ್ಯವಾಗಿಲ್ಲದೆ ದಿಃ 01-10-2021ರೊಳಗೆ ರೂಪಾಯಿ 2 ಲಕ್ಷವನ್ನು ಪಾವತಿಸಿ ಉಳಿದ ಸಾಲ ಮತ್ತು ಬಡ್ಡಿಯನ್ನು ದಿಃ 31-10-2021ರೊಳಗೆ ಸಂಪೂರ್ಣವಾಗಿ ಪಾವತಿಸಿ ಚುಕ್ತ ರಶೀದಿಯನ್ನು ಪಡೆಯುವುದಾಗಿ ತಿಳಿಸಿರುತ್ತಾರೆ. ಇದಕ್ಕೆ ತಪ್ಪಿದಲ್ಲಿ ಯಾವುದೇ ಕ್ರಮವನ್ನು ಕೈಗೊಳ್ಳಬಹುದೆಂದು ಮುಚ್ಚಳಿಕೆ ಪತ್ರ ಬರೆದುಕೊಟ್ಟಿರುತ್ತಾರೆ. ಆದರೆ ಆರೋಪಿ ಮೇಲೆ ತಿಳಿಸಿದಂತೆ ಸಾಲವನ್ನು ಮರುಪಾವತಿಸದ ಕಾರಣ ದಿಃ 05-01-2023 ರಂದು ನಾವು ಕುಂದಾಪುರ ಠಾಣೆಯಲ್ಲಿ ಪ್ರ.ವ.ವರದಿಯನ್ನು ದಾಖಲಿಸಿರುತ್ತೇವೆ. ಅದರೊಂದಿಗೆ ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

ಸಹಕಾರಿ ಸಂಘದ ನೋಂದಣಿ ಪತ್ರ, ಸದಸ್ಯತ್ವದ ಅರ್ಜಿ, ಎಸ್ ಬಿ ಖಾತೆಯ ಅರ್ಜಿ, ಸಾಲದ ಅರ್ಜಿ, ಪ್ರಾಮಿಸರಿ ನೋಟ್, ರಶೀದಿ, ಒಪ್ಪಿಗೆ ಪತ್ರ, ಆಧಾರ ಪತ್ರ, ಸ್ಥಿರಾಸಿ ಅಡಮಾನ ಪತ್ರ, ದಿಃ 04-11-2015ರ ಈ.ಸಿ, ಆರೋಪಿಗೆ ನೀಡಿದ ಕೊನೆಯ ಎಚ್ಚರಿಕೆ ಪತ್ರ, ಆರೋಪಿಯು ಉಪ ನೋಂದಣಾಧಿಕಾರಿಯವರಿಗೆ ನೀಡಿದ ನಕಲಿ ಸಾಲ ಚುಕ್ತ ದೃಢೀಕರಣ ಪತ್ರ, ದಿಃ 27-03-2021ರ ಆರೋಪಿಯ ತಪ್ಪೊಪ್ಪಿಗೆ ಪತ್ರ, ದಿಃ 25-09-2021ರ ಆರೋಪಿಯ ತಪ್ಪೊಪ್ಪಿಗೆ ಪತ್ರಗಳನ್ನು ನೀಡಿ

ದೂರು ನೀಡಿರುತ್ತೇವೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ದಿಃ 07-06-2023 ರಂದು ಕುಂದಾಪುರ ಠಾಣೆಯಲ್ಲಿ ನನ್ನ ಮಾದರಿ ಸಹಿಯನ್ನು 6 ಪುಟಗಳಲ್ಲಿ ಪ್ರತಿ ಹಾಳೆಗೆ 6 ಸಹಿಗಳನ್ನು ಚಾಸಾ-7 ಮತ್ತು 10 ರವರ ಸಮಕ್ಷಮ ಪಡೆದುಕೊಂಡು ಅವುಗಳನ್ನು R-1 ರಿಂದ R-6 ಎಂದು ಗುರುತಿಸಿ ಸದ್ರಿ ಪಂಚನಾಮೆಯನ್ನು ಸಂಜೆ 4 ರಿಂದ 5 ಗಂಟೆಯ ನಡುವೆ ಜರುಗಿಸಲಾಯಿತು. ಸದ್ರಿ 6 ಪುಟಗಳನ್ನು ಒಂದು ಲಕೋಟೆಗೆ ಹಾಕಿ ಅರಗು ಶೀಲು ಮಾಡಿ ಅದರ ಮೇಲೆ ತನಿಖಾಧಿಕಾರಿ ಹಾಗೂ ಪಂಚರ ಸಹಿ ಇರುವ ಲೇಬಲನ್ನು ಅಂಟಿಸಿ ಮುಂದಿನ ತನಿಖೆಗಾಗಿ ಅದನ್ನು "1"ಎಂದು ಗುರುತಿಸಲಾಯಿತು. ಸಾಕ್ಷಿ ಸದ್ರಿ ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಹಾಗೂ 6 ಪುಟಗಳಲ್ಲಿ ಸಾಕ್ಷಿಯ ಸಹಿಗಳನ್ನು ನಿಪಿ-2(ಬಿ) ರಿಂದ 2(ಜಿ) ಎಂದು ಗುರುತಿಸಲಾಯಿತು.

ದಿಃ 22-08-2023 ರಂದು ಕುಂದಾಪುರದ ಠಾಣೆಯಲ್ಲಿ ಆರೋಪಿಯ ಎಸ್ ಬಿ ಖಾತೆಯ ಮೂಲ ಫಾರಂನ್ನು ಚಾಸಾ-7 ಮತ್ತು 10 ರವರ ಸಮಕ್ಷಮ ಪೊಲೀಸರು ವಶಕ್ಕೆ ಪಡೆದು ಪಂಚನಾಮೆಯನ್ನು ಬೆಳಿಗ್ಗೆ 10-45 ರಿಂದ 11-15ರವರೆಗೆ ಜರುಗಿಸಿ ಅದರಲ್ಲಿ ಆರೋಪಿಯ 3 ಸಹಿಗಳನ್ನು ಅವುಗಳನ್ನು S-3, S-4 and S-5 ಎಂದು ಗುರುತಿಸಿ ಅದನ್ನು ಕೈಬರಹ ತಜ್ಞರ ಪರೀಕ್ಷೆ ಗಾಗಿ ಒಂದು ಲಕೋಟೆಗೆ ಹಾಕಿ ಅರಗು ಶೀಲು ಮಾಡಿ ಪಂಚರು ಹಾಗೂ ತನಿಖಾಧಿಕಾರಿಯವರ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತಾರೆ. ಸದ್ರಿ ಲಕೋಟೆಗೆ "6" ಎಂದು ಗುರುತಿಸಲಾಯಿತು. ಸದ್ರಿ ಪಂಚನಾಮೆಯನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಎಸ್ ಬಿ ಖಾತೆಯ ಅರ್ಜಿನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು.

ದಿಃ 22-08-2023 ರಂದು ಕುಂದಾಪುರದ ಠಾಣೆಯಲ್ಲಿ ನಮ್ಮ ಸಂಘದ ರಬ್ಬರ್ ಸ್ಟ್ಯಾಂಪನ್ನು ನಾನು ಹಾಜರುಪಡಿಸಿದಂತೆ ತನಿಖಾಧಿಕಾರಿಯವರು ಚಾಸಾ-7 ಮತ್ತು 10 ರವರ ಸಮಕ್ಷಮ ಪೊಲೀಸರು ವಶಕ್ಕೆ ಪಡೆದು ಪಂಚನಾಮೆಯನ್ನು ಮಧ್ಯಾಹ್ನ 12 ರಿಂದ 12-45 ರವರೆಗೆ ಜರುಗಿಸಿ ಸದ್ರಿ

ಆಕಾಶ ನೀಲಿ ಬಣ್ಣದ ರಬ್ಬರ್ ಸ್ಟ್ಯಾಂಪನ್ನು ನೀಲಿ ಬಣ್ಣದ ಇಂಕಿಗೆ ಅದ್ದಿ ಒಂದು ಖಾಲಿ ಪೇಪರಿನಲ್ಲಿ ಶೀಲು ಹಾಕಿ ಮೊಹರು ಮಾಡಿ S-6 ಎಂದು ಗುರುತಿಸಿ ತನಿಖಾಧಿಕಾರಿ ಹಾಗೂ ಪಂಚರ ಸಹಿಯನ್ನು ಹಾಕಿ ಒಂದು ಲಕೋಟೆಗೆ ಹಾಕಿ ಅರಗು ಶೀಲು ಮಾಡಿರುತ್ತಾರೆ. ಸದ್ರಿ ಲಕೋಟೆಯನ್ನು "B"ಎಂದು ಗುರುತಿಸಲಾಯಿತು. ರಬ್ಬರ್ ಸ್ಟ್ಯಾಂಪನ್ನು ಮತ್ತೊಂದು ಲಕೋಟೆಗೆ ಹಾಕಿ ಮೊಹರು ಮಾಡಿ ತನಿಖಾಧಿಕಾರಿ ಹಾಗೂ ಪಂಚರ ಸಹಿಯಿರುವ ಲೇಬಲ್ ಅಂಟಿಸಿ ಒಂದು ಲಕೋಟೆಗೆ ಹಾಕಿ ಅರಗು ಶೀಲು ಮಾಡಿರುತ್ತಾರೆ. ಸದ್ರಿ ಲಕೋಟೆಯನ್ನು "7" ಎಂದು ಗುರುತಿಸಲಾಯಿತು. ಸಾಕ್ಷಿ ಸದ್ರಿ ಪಂಚನಾಮೆಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ರಬ್ಬರ್ ಸ್ಟ್ಯಾಂಪಗಳಲ್ಲಿರುವ S-6 ಎಂದು ಗುರುತಿಸಿರುವ ಹಾಳೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-5(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ದೂರಿನೊಂದಿಗೆ ಲಗತ್ತಿಸಿರುವ ಸಂಘದ ನೋಂದಣಿ ಪ್ರಮಾಣ ಪತ್ರ, ಸದಸ್ಯತನ ಅರ್ಜಿ, ಎಸ್. ಬಿ ಖಾತೆಯ ಅರ್ಜಿ, ಸಾಲದ ಅರ್ಜಿ, ಪ್ರಾಮಿಸರಿ ನೋಟ್, ರಶೀದಿ, ಒಪ್ಪಿಗೆ ಪತ್ರ, ಆಧಾರ ಪತ್ರ, ನೋಂದಾಯಿತ ಅಡಮಾನ ಪತ್ರ, ದಿಃ 04-11-2015ರ ಋಣಭಾರ ರಹಿತ ಪತ್ರ, ಎಚ್ಚರಿಕೆ ಪತ್ರ, ನಕಲಿ ಸಾಲ ಚುಕ್ತ ರಶೀದಿ, 2 ತಪ್ಪೊಪ್ಪಿಗೆ ಪತ್ರಗಳ ದೃಢೀಕೃತ ಪ್ರತಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-6 ರಿಂದ ನಿಪಿ-19 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರ ಕೋರಿಕೆ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ . ದಂ. ಕುಂದಾಪುರ**